ವಿಚಾರಗಳು ಈ ಸದನಕ್ಕೂ ಅವರು ಕೊಟ್ಟಿರತಕ್ಕ ರಾಜೀನಾಮೆಗೂ ಯಾವ ರೀತಿಯ ಸಂಬಂಧವನ್ನು ಕಲ್ಪಿಸುವುದಕ್ಕೆ ಸಾಧ್ಯವಿಲ್ಲ. ಆದರೆ ನಿನ್ನೆ ಮುಖ್ಯಮಂತ್ರಿಗಳು ಹೇಳಿದರು. ಶ್ರೀಮಾನ್ ಬೈರೇಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡಿದರು ಎಂದು ಕಾಣುತ್ತದೆ. ಮಾನ್ಯ ಪಾಟಾಳ ನಾಗರಾಜ್ ಅವರೂ ಅದಕ್ಕೆ ಧ್ವನಿಗೂಡಿಸಿದರು. ಆಗ ಅವರು ಏನು ಹೇಳಿದರೆಂದರೆ, ನಾವು ಕೇಂದ್ರಕ್ಕೆ ನಾವು ಕಾಗದ ಬರೆಯುವುದಕ್ಕೆ, ನಾನು ಈಗಾಗಲೇ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ ಎಂದು ಹೇಳಿದರು. ಇವತ್ತು ಮುಖ್ಯಮಂತ್ರಿಗಳು ನನಗೂ ಕಾಗದ ಬರೆದಿದ್ದಾರೆ, ಕಾಗದದಲ್ಲಿ ಅವರಿಗೆ ದೇಹಸ್ಥಿತಿ ಸರಿ ಇಲ್ಲ, ಎರಡು ದಿವಸಗಳ ಕಾಲ ಸದನಕ್ಕೆ ಬರುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ ಸಭೆಯ ಪರವಾಗಿ ಅವರ ಆರೋಗ್ಯ ಸುಧಾರಿಸಲಿ ಎಂದು ನಾನು ಆಶಿಸುತ್ತೇನೆ. ಈ ಕುಲದೀಪ್ ನಿಂಗ್ ಆಯೋಗದ ವರದಿ ಈಗ ಕೇಂದ್ರಸರ್ಕಾರದ ಆಸ್ತಿಯಾಗಿದೆ ಆ ವರದಿ ಬಹಿರಂಗವಾದ ಮೇಲೆ, it becomes an issue for public debate. Let us wait till then.

334ರ ನಿಯಮದ ಮೇರೆಗೆ

ಶಿವಮೊಗ್ಗ ರಾಷ್ಟ್ರೀಯ ಕಾನೂನು ಕಾಲೇಜಿಗೆ ನೇರ ವೇತನ ಪದ್ಧತಿಯನ್ನು ಒಳಪಡಿಸದೆ ಇರುವ ವಿಚಾರ

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ೧೯೭೪–೭೫ರ ಈಚೆಗೆ ಪ್ರಾರಂಭವಾದ ಹಾಸನದ ಎಂ. ಕೃಷ್ಣಾ ಲಾ ಕಾಲೇಜ್, ಸಿರ್ಸಿಯ ಎಂ.ಇ.ಎಸ್. ಲಾ ಕಾಲೇಜು ಮತ್ತು ಗುಲ್ಬರ್ಗಾದ ಸಿದ್ದಾರ್ಥ ಲಾ ಕಾಲೇಜುಗಳಿಗೆ ಸರ್ಕಾರವು ನೇರ ವೇತನ ಪದ್ಧತಿಗೆ ಒಳಪಡಿಸಿರುವಾಗ, ೧೯೬೯ರಲ್ಲಿ ಪ್ರಾರಂಭಿಸಿದ ಶಿವಮೊಗ್ಗ ರಾಷ್ಟ್ರೀಯ ಕಾನೂನು ಕಾಲೇಜಿಗೆ ನೇರ ವೇತನ ಪದ್ಧತಿ ಒಳಪಡಿಸದೇ ಇರುವುದರಿಂದ ಈ ಕಾಲೇಜಿಗೆ ತೊಂದರೆ ಆಗದೆ ಸರ್ಕಾರ ಈ ಬಗ್ಗೆ ಗಮನ ಹರಿಸಿ, ತಕ್ಷಣ ಸೂಕ್ತ ಕ್ರಮ ತಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಸ್ವಾಮಿ, ತಪ್ಪು ಅಪ್ಪಣೆ ಪಡೆದು ಈ ಒಂದು ಹೇಳಿಕೆಯನ್ನು ಸಭೆಯ ಮುಂದಿಡಲು ಆಶಿಸುತ್ತೇನೆ,

ಕರ್ನಾಟಕ ರಾಜ್ಯದಲ್ಲಿ ೪೨ ಕಾನೂನು ಕಾಲೇಜುಗಳು ಇವೆ. ದಿನಾಂಕ ೧–೨–೧೯೭೫ರಿಂದ ರಾಜ್ಯದಲ್ಲಿನ ಕಾನೂನು ಕಾಲೇಜುಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ತರಲಾಯಿತು. ಆದರಂತೆ ಕಾನೂನು ಕಾಲೇಜುಗಳು ಸರ್ಕಾರದಿಂದ ಅನುದಾನವನ್ನು ಕೋರಿ ವಿನಂತಿ ಮಾಡಿಕೊಂಡಾಗ ಈ ಕಾಲೇಜುಗಳು ಲೆಕ್ಕತಪಾಸಣೆ ಇತ್ಯಾದಿಗಳನ್ನು ಪೂರೈಸಿ ಅನುದಾನ ಮಂಜೂರಾತಿಗೆ ಅವಕಾಶ ಮಾಡಲಾಗುವುದು. ರಾಜ್ಯದಲ್ಲಿ ೪೨ ಕಾನೂನು ಕಾಲೇಜುಗಳ ಪೈಕಿ ೧೩ ಕಾಲೇಜುಗಳಿಗೆ ಅನುದಾನ ಮಂಜೂರಾತಿ ಬಗ್ಗೆ ಪ್ರಸ್ತಾವನೆಗಳು ಬಂದಿವೆ ಅವುಗಳಲ್ಲಿ ೫ ಕಾನೂನು ಕಾಲೇಜುಗಳಿಗೆ ಸರ್ಕಾರ ವೇತನಾನುದಾನ ಬಿಡುಗಡೆ ಮಾಡಿರುತ್ತದೆ. ಅನುದಾನ ಪಡೆಯುತ್ತಿರುವ ೫ ಕಾನೂನು ಕಾಲೇಜುಗಳ ವಿವರ ಈ ಕೆಳಕಂಡಂತೆ ಇದೆ.

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಪ್ರಾರಂಭಿಕ ವರ್ಷ	ಅನುದಾನ ಪಡೆದ ದಿನಾಂಕ
೧	ಆರ್. ಎಲ್. ಕಾನೂನು ಕಾಲೇಜು, ಬೆಳಗಾಂ	೧೯೫೯–೬೦	೧–೪–೮೬
೨	ಶಾರದಾ ವಿಲಾಸ ಕಾನೂನು ಕಾಲೇಜು, ಮೈಸೂರು	೧೯೫೪–೫೫	೧–೧–೮೮
೩	ಎಂ. ಇ. ಎಸ್. ಕಾನೂನು ಕಾಲೇಜು, ಸಿರಸಿ.	೧೯೭೪–೭೫	೧–೭–೮೬
೪	ಕೃಷ್ಣ ಕಾನೂನು ಕಾಲೇಜು. ಹಾಸನ.	೧೯೭೪–೭೫	೧–೧–೮೮
೫	ಸಿದ್ದಾರ್ಥ ಕಾನೂನು ಕಾಲೇಜು. ಗುಲ್ಬರ್ಗ.	೧೯೮೨–೮೩	೧–೧–೮೮

ಉಳಿದ ೮ ಕಾಲೇಜುಗಳ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಅವುಗಳ ಪೈಕಿ ರಾಷ್ಟ್ರೀಯ ಕಾನೂನು ಕಾಲೇಜು, ಶಿವಮೊಗ್ಗ, ಒಂದಾಗಿರುತ್ತದೆ.